ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

# ಪತ್ರಿಕಾ ತುಣುಕುಗಳು
# PAPER CLIPPINGS


ಇಲಾಖೆ / ವಿಷಯ : DEPARTMENT / SUBJECT: ಕೋರ್ಟ್ ವಿಚಾರ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 22/01/2020

### ಅನರ್ಹತೆ ವಿಚಾರ ಕುರಿತು ಸಂಸತ್‌ಗೆ ಸುಪ್ರೀಂ ಕೋರ್ಟ್ ಸಲಹೆ

## ಸ್ಪೀಕರ್ ಅಧಿಕಾರದ ಪರಿಶೀಲನೆ ಅಗತ್ಯ

**ಹೊಸದಿಲ್ಲಿ:** ಶಾಸಕರು ಅಥವಾ ಸಂಸದರ ಅನರ್ಹತೆ ನಿರ್ಧರಿಸುವ ಅಧಿಕಾರವನ್ನು ಸ್ಪೀಕರ್ ಬದಲಾಗಿ ಸ್ವತಂತ್ರ ಸಂಸ್ಥೆ ಅಥವಾ ಸಮಿತಿಗೆ ನೀಡುವ ಬಗ್ಗೆ ಪರಿಶೀಲನೆ ನಡೆಸುವಂತೆ ಸುಪ್ರೀಂ ಕೋರ್ಟ್ ಮಂಗಳವಾರ ಸಂಸತ್‌ಗೆ ಸಲಹೆ ಮಾಡಿದೆ. ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿನ ಶಾಸಕರ ಅನರ್ಹತೆ ಪ್ರಕರಣಗಳು ನಡೆದಿರುವ ಹಿನ್ನೆಲೆಯಲ್ಲಿ ಈ ಸಲಹೆ ಮಹತ್ವದ್ದಾಗಿದೆ.



ಮಣಿಪುರದ ಸಚಿವ ಟಿ. ಶ್ಯಾಮ್ ಕುಮಾರ್ ಅವರ ಅನರ್ಹತೆ ಅರ್ಜಿ ವಿಚಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿ ವಿಚಾರಣೆ ವೇಳೆ ನ್ಯಾಯಮೂರ್ತಿ ಆರ್.ಎಫ್. ನಾರಿಮನ್ ನೇತೃತ್ವದ ತ್ರಿಸದಸ್ಯ ಪೀಠವು ಸ್ಪೀಕರ್ ಅಧಿಕಾರ ವ್ಯಾಪ್ತಿ ಕುರಿತು ಹಲವು ಪ್ರಶ್ನೆಗಳನ್ನು ಎತ್ತಿದೆ. ''ಸ್ಪೀಕರ್ ಸಹ ರಾಜಕೀಯ ಪಕ್ಷಕ್ಕೆ ಸೇರಿದ ವ್ಯಕ್ತಿಯೇ ಆಗಿರುವುದರಿಂದ ಶಾಸಕರು ಅಥವಾ ಸಂಸದರ ಅನರ್ಹತೆ ಕುರಿತು ಅವರಿಗಿರುವ ಅಧಿಕಾರದ ಬಗ್ಗೆ ಪುನರ್ ಪರಿಶೀಲನೆ ನಡೆಸುವ ಅಗತ್ಯವಿದೆ. ಅನರ್ಹತೆ ಪ್ರಶ್ನೆ ಉದ್ಭವಿಸಿದಾಗ ಅದನ್ನು ಸ್ಪೀಕರ್ ಬದಲು ಸ್ವತಂತ್ರ ಸಂಸ್ಥೆ ಅಥವಾ ಸಮಿತಿ ಇತ್ಯರ್ಥಪಡಿಸುವ ಬಗ್ಗೆ ಹಾಗೂ ಇದಕ್ಕೊಂದು ಶಾಶ್ವತ ವ್ಯವಸ್ಥೆಯನ್ನು ರೂಪಿಸುವ ಬಗ್ಗೆ ಪರಿಶೀಲನೆ ಮಾಡುವಂತೆ ಸಂಸತ್ ಚಿಂತನೆ ನಡೆಸಬೇಕು,'' ಎಂದು ಪೀಠ ಅಭಿಪ್ರಾಯಪಟ್ಟಿದೆ.

ಪಕ್ಷಾಂತರದಂತಹ ಆರೋಪಗಳಿಂದ ಅನರ್ಹಗೊಂಡ ಶಾಸಕರು ಅಥವಾ ಸಂಸದರು ಒಂದೇ ಒಂದು ದಿನವೂ ಅಧಿಕಾರದಲ್ಲಿ ಮುಂದುವರಿಯಲು ಅವಕಾಶ ನೀಡಬಾರದು. ಅಲ್ಲದೇ ಸ್ಪೀಕರ್ ಸಹ ಅನರ್ಹತೆ ಕುರಿತ ಅರ್ಜಿಗಳನ್ನು ದೀರ್ಘಕಾಲದವರೆಗೆ ಇತ್ಯರ್ಥಪಡಿಸದೇ ಇರುವುದೂ ಒಳ್ಳೆಯದಲ್ಲ, ಗರಿಷ್ಠ ಮೂರು ತಿಂಗಳ ಒಳಗಾಗಿ ಇತ್ಯರ್ಥಪಡಿಸುವುದು ಉತ್ತಮ ಎಂದೂ ನ್ಯಾಯಾಲಯ ಹೇಳಿದೆ.

**ಮಣಿಪುರದ ಪ್ರಕರಣವೇನು?:** 2017ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಟಿ. ಶ್ಯಾಮ್‌ಕುಮಾರ್ ಆಯಂಡ್ರೊ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಕಾಂಗ್ರೆಸ್ 28 ಸ್ಥಾನಗಳನ್ನು ಪಡೆದಿತ್ತು. 60 ಸದಸ್ಯ ಬಲದ ಮಣಿಪುರ ವಿಧಾನಸಭೆಯಲ್ಲಿ ಕಾಂಗ್ರೆಸ್ ಸರಕಾರ ಸ್ಥಾಪಿಸಲು ಇನ್ನೂ 3 ಸ್ಥಾನಗಳ ಅಗತ್ಯವಿತ್ತು. ಈ ಮಧ್ಯೆ, 21 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿ ಉಳಿದ ಪಕ್ಷಗಳೊಂದಿಗೆ ಮೈತ್ರಿ ಮೂಲಕ ತನ್ನ ಬಲವನ್ನು 30ಕ್ಕೆ ಹೆಚ್ಚಿಸಿಕೊಂಡಿತ್ತು. ಬಿಜೆಪಿ ಸರಕಾರ ರಚಿಸಲು ಇನ್ನೂ ಒಬ್ಬ ಶಾಸಕರ ಬೆಂಬಲ ಅವಶ್ಯವಿತ್ತು. ಆಗ ಶ್ಯಾಮ್‌ಕುಮಾರ್ ಅವರು ಬಿಜೆಪಿ ಸೇರಿ ಸರಕಾರ ರಚನೆಗೆ ಸಹಕರಿಸಿದ್ದರು. ಆದರೆ ಅವರು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿರಲಿಲ್ಲ, ಶ್ಯಾಮ್ ಕುಮಾರ್ ಅವರನ್ನು ಪಕ್ಷಾಂತರ ನಿಷೇಧ ಕಾಯಿದೆ ಅಡಿ ಅನರ್ಹಗೊಳಿಸಬೇಕೆಂದು ಕಾಂಗ್ರೆಸ್‌ನ ಇಬ್ಬರು ಶಾಸಕರು ಸ್ಪೀಕರ್‌ಗೆ ಮನವಿ ಮಾಡಿದ್ದರೂ ಸ್ಪೀಕರ್ ಈ ವಿಷಯದಲ್ಲಿ ಯಾವುದೇ ತೀರ್ಮಾನ ಕೈಗೊಳ್ಳದೆ ವಿಳಂಬ ಮಾಡಿದ್ದರು. ಇದನ್ನು ಪ್ರಶ್ನಿಸಿ ಕಾಂಗ್ರೆಸ್ ಶಾಸಕರು ಹೈಕೋರ್ಟ್, ನಂತರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಸೋಮವಾರ ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಸ್ಪೀಕರ್ ಕೂಡಲೇ ತೀರ್ಮಾನ ಕೈಗೊಳ್ಳಬೇಕೆಂದೂ, ಅನರ್ಹತೆ ಪ್ರಕರಣದ ತೀರ್ಮಾನವನ್ನು ಇಷ್ಟಬಂದಷ್ಟು ಕಾಲ ವಿಳಂಬ ಮಾಡುವಂತಿಲ್ಲ ಎಂದು ಸೂಚಿಸಿತ್ತು.